**ದಿನಾಂಕ : 16-07-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು**

---

**ಪಾಟೀ ಸವಾಲು ಶ್ರೀ.ವಿ.ಪಿ.ಎಸ್.ಜೆ. ವಕೀಲರಿಂದ:-**

ನನಗೆ ಈಗ 40 ವಯಸ್ಸು. ನಾನು ಹಾಜರುಪಡಿಸಿರುವಂತಹ ಪೋಟೋಗಳು ನೆಗೆಟಿವಗಳು ಇದ್ದವು ಎಂದರೆ ಸರಿ. ಸಾಕ್ಷಿ ಮುುಂದುವರೆದು ಆ ಸಮಯದಲ್ಲಿ ನಗೆಟಿವಗಳು ಇರಲಿಲ್ಲ. ನಾನು 1979 ರಲ್ಲಿ ಹುಟ್ಟಿರುತ್ತೇನೆ. ನನ್ನ ಬಳಿ ನನ್ನ ತಾಯಿ ನನ್ನ ತಮ್ಮಂದಿರು ಶ್ಯಾಮ್ ಸುಂದರರವರ ಮಗ ಅಂತಾ ತೋರಿಸಲು ಸರ್ಕಾರದಿಂದ ಅನುದಾನ ಪಡೆದಿರುವ ಅಥವಾ ರೇಷನ್ ಕಾರ್ಡಾಗಲೀ ಯಾವುದೇ ದಾಖಲಾತಿಗಳು ಇರುವುದಿಲ್ಲ. ಸಾಕ್ಷಿ ಮುಂದುವರೆದು ಶಾಲಾ ದಾಖಲಾತಿಗಳು ಇರುತ್ತೆ, ಶ್ಯಾಮ್ ಸುಂದರರವರೇ ನನ್ನನ್ನು ಶಾಲಗೆ ದಾಖಲಿಸಿರುವ ಬಗ್ಗೆ ದಾಖಲಾತಿ ರಿಜಿಸ್ಟರನ್ನು ನಾನು ಹಾಜರುಪಡಿಸಿರುವುದಿಲ್ಲ.

2. ನನ್ನ ಮದುವೆಯು 15 ವರ್ಷಗಳ ಹಿಂದೆ ಹಾಜರುಪಡಿಸಿರುತ್ತೇನೆ. ನಾನು ನನ್ನ ಮದುವೆಯ ಆಮಂತ್ರಣ ಪತ್ರಿಕ ಹಾಜರುಪಡಿಸಿರುವುದಿಲ್ಲ. ನನ್ನ ಮದುವೆಯನ್ನು ನೊಂದಣಿ ಮಾಡಿಸಿರುವುದಿಲ್ಲ. ನನ್ನ ತಾಯಿ ಶ್ಯಾಮ್ ಸುಂದರರವರ ಜೊತೆ ಮದುವೆಯಾದ ಬಗ್ಗೆ ಆಮಂತ್ರಣ ಪತ್ರಿಕೆಯಾಗಲಿ, ಯಾದಿಯಾಗಲಿ ಪೋಟೋವನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಾಯಿಯ ಮದುವೆಯು ಮುದಗಲ್ಲನಲ್ಲಿ ಹಿರಿಯರ ಸಮಕ್ಷಮ ಆಗಿರುತ್ತದೆ. 60 ವರ್ಷಗಳ ಹಿಂದೆ ಆಗಿರುತ್ತದೆ. ಮದುವೆಯು ದೇವಸ್ಥಾನದಲ್ಲಿ ಆಗಿರುತ್ತದೆ. ವೆಂಕಟರಾಯನ ಪೇಟೆಯಲ್ಲಿರುವ ಆಂಜನೇಯ್ಯ ದೇವಸ್ಥಾನದಲ್ಲಿ ಆಗಿರುತ್ತದೆ. ಮದುವೆಯನ್ನು ಹಿರಿಯರಾಗಿ ನನ್ನ ತಂದೆಯ ತಂದೆ ರಾಮದಾಸಪ್ಪ, ನನ್ನ ತಾಯಿಯ ತಂದೆ ಅವಳೆಪ್ಪ ಇದ್ದರು. ಬೇರೆ ಹಿರಿಯರು ಇದ್ದರು ಅವರ ಹೆಸರುಗಳು ನನಗೆ ನೆನಪಿಲ್ಲ. ನಾನು ನನ್ನ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಮದುವೆಯ ಸಮಯದಲ್ಲಿ ದೇವಸ್ಥಾನದಲ್ಲಿ ಆಗಿದ್ದ ಬಗ್ಗೆ ಯಾವುದೇ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ದಾವೆಯಲ್ಲಿ ನನ್ನತಾಯಿಯೇ ಶ್ಯಾಮ್ ಸುಂದರನ ಹೆಂಡತಿ ಎನ್ನುವ ಬಗ್ಗೆ ಬರೆದಿರುವುದನ್ನು ನೋಡಿರುತ್ತೇನೆ.

3. 2012 ರಲ್ಲಿ ಮುದಗಲ್ಲ ಲಿಂಗಸಗೂರು ವಿಧಾನಸಬಾ ಕ್ಷೇತ್ರದಲ್ಲಿ ಇತ್ತು. ಸಾಕ್ಷಿಗೆ 2012 ರ ಚುನಾವಣಾ ಲಿಸ್ಟನ್ನು ತೋರಿಸಲಾಗಿ ಅದರಲ್ಲಿ ನನ್ನ ಹೆಸರಿನ ಮುಂದೆ ನನ್ನ ತಂದೆಯ ಹೆಸರು

ಇರುವುದಿಲ್ಲ. ನನ್ನ ತಾಯಿಯ ತಾಯಿಯ ಹೆಸರು ಬರೆದಿರುತ್ತದೆ ತಂದೆಯ ಹೆಸರು ಬರೆದಿರುವುದಿಲ್ಲ ಎಂದರೆ ಅವಳು ಮುದ್ದಮ್ಮನ ಮನೆಗೆ ದತ್ತಕ್ಕೆ ಹೋಗಿರುತ್ತಾಳೆ. ಆ ಬಗ್ಗೆ ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

4. ಆರ್.ಆರ್.ಟಿ ಅಪೀಲಿನಲ್ಲಿ ನನ್ನ ತಾಯಿ ಮತ್ತು ನಾವು ಶ್ಯಾಮ್ ಸುಂದರನ ಮಕ್ಕಳೇ ಅಲ್ಲಾ ರಮೇಶ ಮತ್ತು ಪದ್ಮಾವತಿ ಎಂಬುವರು ಅವರು ವಾರಸುದಾರರು ಎಂದು ಡೆಪ್ಯೂಟಿ ಕಮೀಷನರವರು ಆದೇಶಿಸಿರುತ್ತಾರೆ ಎಂದರೆ ಸುಳ್ಳು, ರಾಮದಾಸಪ್ಪ ಅವರ ತಂದೆಯ ಒಬ್ಬನೇ ಮಗ. ಗೋಸಲಪ್ಪನಿಗೆ ಲಕ್ಷ್ಮಿದಾಸಪ್ಪ, ಶ್ರೀನಿವಾಸಪ್ಪ ಹಾಗೂ ರಾಮದಾಸಪ್ಪ ಮಕ್ಕಳು. ಲಕ್ಷ್ಮೀದಾಸಪ್ಪನ ಮಕ್ಕಳು ವಿಠಲದಾಸಪ್ಪ ಮತ್ತು ಚಂದ್ರಪ್ಪ ಅಂತಾ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ-12 ನ್ನು ತೋರಿಸಲಾಗಿ ಅದರಲ್ಲಿ ಅಜ್ಜನ ಹೆಸರು ಶ್ಯಾಮ್ ಸುಂದರ ತಂದೆ ರಾಮದಾಸ ಅಂತಾ ತಂದೆಯ ಹೆಸರು ಖಾಲಿ ಬಿಟ್ಟಿದ್ದು ಸಾಕ್ಷಿಗೆ ಓದಿ ಹೇಳಲಾಗಿ ತನ್ನ ತಂದೆ ಹೆಸರು ಮಾತ್ರ ಓದಲು ಬರುತ್ತದೆ ಬೇರೆಯವರ ಹೆಸರು ಓದಲು ಬರುವುದಿಲ್ಲ ಎನ್ನುತ್ತಾರೆ. ತಹಶೀಲ್ದಾರರವರು ತಾಲ್ಲೂಕುದಲ್ಲಿ ವಂಶವೃಕ್ಷ ನೀಡುತ್ತಾರೆ ಗ್ರಾಮಲೆಕ್ಕಾದಿಕಾರಿಗಳು ಹೋಬಳಿ ಲೆಕ್ಕದಲ್ಲಿ ನೀಡುತ್ತಾರೆ. ಆ ಸಮಯದಲ್ಲಿ ಗ್ರಾಮ ಲೆಕ್ಕಾದಿಕಾರಿಗಳು ಪಂಚನಾಮೆ ಮಾಡಿರುತ್ತಾರೆ. ಆ ಬಗ್ಗೆ ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿರುವಂತಹ ನಿಪಿ-12 ಮತ್ತು ನೋಟರಿ ಮಾಡಿಸಿ ತಹಶೀಲ್ದಾರವರಗೆ ನೀಡಿರುವ ವಂಶಾವಳಿ ಎರಡು ಒಂದೇ ಇರುತ್ತವೆ. ಗ್ರಾಮ ಲೆಕ್ಕಾದಿಕಾರಿಗಳಿಗೆ ನಾವೇ ಕರೆದುಕೊಂಡು ಹೋಗಿದ್ದೆವು ಅಲ್ಲಿ ಬಾಯಿ ಮಾತಿನ ಮೂಲಕ ಕೇಳಿ ನಮಗೆ ವಂಶವೃಕ್ಷ ನೀಡಿರುತ್ತಾರೆ. ಪಂಚನಾಮೆಯಲ್ಲಿ ಕಚೇರಿಯಲ್ಲಿ ಸಹಿ ಮಾಡಿಸಿಕೊಂಡಿರುತ್ತಾರೆ ಕಳುಹಿಸಿರುತ್ತಾರೆ. ನಿಪಿ-12 ರಲ್ಲಿ ಸಾಕ್ಷಿಗಳ ಪಟ್ಟಿಯಲ್ಲಿರುವ ವ್ಯಕ್ತಿಗಳು ಜೀವಂತ ಇರುತ್ತಾರೆ. ಸದರಿ ನಿಪಿ-12 ರಲ್ಲಿ ತಾರೀಖನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಅದು ಯಾವ ಜಿಲ್ಲೆ, ತಾಲ್ಲೂಕು, ಊರಿನದ್ದು ಅಂತಾ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಸಹಿ ಇರುತ್ತದೆ ಸೀಲ್ ಇರುತ್ತದೆ ಎನ್ನುತ್ತಾರೆ. ಆ ದಿನ ಕಾಮಣ್ಣ ಎನ್ನುವ ಗ್ರಾಮ ಲೆಕ್ಕಾದಿಕಾರಿ ನಮ್ಮ ಜೊತೆ ಬಂದಿದ್ದರು. ಅದು ಯಾವ ವರ್ಷದಲ್ಲಿ ಅಂತಾ ನನಗೆ ನೆನಪಿಲ್ಲ. 8-9 ವರ್ಷಗಳ ಹಿಂದೆ ಬಂದಿರುತ್ತಾರೆ. ನಾನು ಹಾಜರುಪಡಿಸಿರುವಂತಹ ನೋಟರಿ ಕಾಪಿಯಲ್ಲಿ ನನ್ನ ತಾಯಿ ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಅದನ್ನು ಅವರಿಗೆ ಕೇಳಿ. ಅದರಲ್ಲಿ ಪಂಚರು ಅಂತಾ ಇಂಗ್ಲಿಷನಲ್ಲಿ ಸಹಿ ಮಾಡಿದವರ ಹೆಸರು ಹೇಳಲು ಬರುವುದಿಲ್ಲ.

5. ಶ್ಯಾಮ್ ಸುಂದರನಿಗೆ ಪದ್ಮಾವತಿ ಮತ್ತು ರಮೇಶ ಮಾತ್ರ ಉತ್ತರಾಧಿಕಾರಿಗಳು ಇದ್ದು ನಮಗೂ ಅವರಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವಂತಹ ಪೋಟೋಗಳು ಹುಡುಗನ ಜನ್ಮದಿನದ ಪೋಟೊಗಳು ಅದು ಯಾವ ಹುಡುಗ ಅಂತಾ ಹೇಳಲು ಬರುವುದಿಲ್ಲ. ಸದರಿ 1 ನೇ ಪೋಟೋದಲ್ಲಿ ಕೆಳೆಗ ಕುಳಿತಿರುವವರು ಎಲ್ಲಾ ನಾವು 3 ಜನ ಮಕ್ಕಳು ಇರುತ್ತೇವೆ. ಅದರಲ್ಲಿ ನನ್ನ ತಂದೆ ತಾಯಿ ಇರುತ್ತಾರೆ. ಸದರಿ ಪೋಟೋಗಳು 30-35 ವರ್ಷಗಳ ಹಿಂದಿನವು. ನಾನು ಹಾಜರುಪಡಿಸಿರುವ ಕ್ವಾರಿಯ ಪೋಟೋಗಳಲ್ಲಿ ನಾನು ಇರುವುದಿಲ್ಲ ಏಕೆಂದರೆ ನಾನು ತೆಗೆದಿರುತ್ತೇನೆ. ಅವು ಯಾವ ಸರ್ವೇ ನಂಬರಿಗೆ ಸಂಬಂಧಿಸಿರುವುದು ಎಂದು ಅಲ್ಲಿ ಬರೆದಿರುವುದಿಲ್ಲ ಆದರೆ ಅದು ಸರ್ವೆ ನಂ.443 ಕ್ಕೆ ಸಂಬಂಧಿಸಿದ್ದು.

6. ಶ್ಯಾಮ್ ಸುಂದರ ಗೊಲ್ಲರ ಸಮಾಜದವನು ಎಂದರೆ ಸರಿ. ನಾವು ಮಾದಿಗ ಸಮಾಜದವರು ಎಂದರೆ ಸರಿ. ಶ್ಯಾಮ್ ಸುಂದರರವರು ನನ್ನ ತಾಯಿಯನ್ನು ಕಾನೂನಾತ್ಮಕವಾಗಿ ಮದುವೆಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಹಿರಿಯರ ಮುಖಾಂತರ ಆಗಿರುತ್ತಾರೆ ಎನ್ನುತ್ತಾರೆ. ಶ್ಯಾಮ್ ಸುಂದರರವರು ಪದ್ಮಾವತಿಯವರಿಗೆ ಯಾವುದೇ ವಿಚ್ಛೇದನ ನೀಡಿರುದಿಲ್ಲ ಎಂದರೆ ನಮಗೆ ಏನೂ ಗೊತಿರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ-13 1 ರಿಂದ 3 ರಲ್ಲಿಯಾವುದೇ ಶ್ಯಾಮ್ ಸುಂದರ ಇರವುದಿಲ್ಲ, ನನ್ನ ತಾಯಿ ಇರುವುದಿಲ್ಲ ಹಾಗೂ ನಾವು ಇರುವುದಿಲ್ಲ ದಾವೆಗಾಗಿ ಸೃಷ್ಟಿಸಿ ಸುಳ್ಳು ಸಾಕ್ಷಿಹೇಳುತ್ತಿದ್ದೇನೆ ಎಂದೆರೆ ಸರಿಯಲ್ಲ. ನಾನು ನನ್ನ ಸಹೋದರಿ ಮತ್ತು ತಾಯಿ ಸೇರಿಕೊಂಡು ಆಸ್ತಿಯನ್ನು ಕಬಳಿಸುವ ಉದ್ದೇಶಕ್ಕಾಗಿ ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ.ಕೇ. ಸರಿ ಇದೆ

**ಸಹಿ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು.,ಲಿಂಗಸುಗೂರು